# 'ವಿವಾದ ಪುರುಷ' ಮಹೇಶ್ ಭಟ್



ಈವಾರ (ಸೆ.20) ತನ್ನ 72ನೇ ಹುಟ್ಟುಹಬ್ಬವನ್ನು ಆಚರಿಸಲಿರುವ ನಿರ್ಮಾಪಕ ಮಹೇಶ್ ಭಟ್, ಬಾಲಿವುಡ್ ಕಂಡ ಅತ್ಯಂತ ಸೃಜನಶೀಲ ನಿರ್ದೇಶಕರಲ್ಲಿ ಮುಂಚೂಣಿಯಲ್ಲಿ ಇರುವವರು. ಸೃಜನಶೀಲತೆಗೂ ವಿವಾದಕ್ಕೂ ಬಹಳ ದೊಡ್ಡ ನಂಟಿದೆ ಎನ್ನುವುದು ಮಹೇಶ್ ಭಟ್ ವಿಷಯದಲ್ಲಂತೂ ಸತ್ಯವೇ. ನಟ ಸುಶಾಂತ್‌ಸಿಂಗ್ ರಾಜಪೂತ್ ಆತ್ಮಹತ್ಯೆಯ ಬಳಿಕ ನಡೆಯುತ್ತಿರುವ ವಾದವಿವಾದದಲ್ಲಿ ಮಹೇಶ್ ಭಟ್ ಹೆಸರೂ ಪದೇ ಪದೇ ಪ್ರಸ್ತಾಪವಾಗುತ್ತಿದೆ. ಸುಶಾಂತ್ ಆತ್ಮಹತ್ಯೆಗೆ ಕಾರಣ ಹುಡುಕಲು ಹೊರಟಿರುವ ಪೊಲೀಸ್ ಅಧಿಕಾರಿಗಳು ಸದ್ಯಕ್ಕೆ ಅಪ್ಪಿಕೊಂಡಿರುವುದು ಸುಶಾಂತ್‌ನ ಗರ್ಲ್‌ಫ್ರೆಂಡ್ ರಿಯಾ ಚಕ್ರವರ್ತಿ ಎಂಬ ನಟಿಯನ್ನು. ಈ ಪ್ರಕರಣದಲ್ಲಿ ರಿಯಾಗೆ ಬೆಂಬಲವಾಗಿ ನಿಂತಿರುವವರು ಮಹೇಶ್ ಭಟ್.

ವಯಸ್ಸಿನ ಹಿನ್ನೆಲೆಯಲ್ಲಿ ಅಪ್ಪಮಗಳಂತೆ ಇರುವ ರಿಯಾ ಮತ್ತು ಮಹೇಶ್ ಭಟ್ ಪರಸ್ಪರ ಸಾಂತ್ವನದ ಭಂಗಿಯಲ್ಲಿ ಇರುವ ಫೋಟೋವೊಂದು ಇದೀಗ ವೈರಲ್ ಆಗಿದೆ. ತಮ್ಮ ಮಕ್ಕಳ ವಯಸ್ಸಿನ ನಟಿಯರ ಜೊತೆಗೆ ಮಹೇಶ್ ತೀರಾ ಇಂಟಿಮೇಟ್ ಆಗಿರುತ್ತಾರೆ ಎನ್ನುವ ಆರೋಪವೂ ಗಾಳಿಯಲ್ಲಿ ತೇಲಾಡುತ್ತಿದೆ. ಅದಕ್ಕೆ ತಕ್ಕಂತೆ ಈ ಹಿಂದೆ ಆತ್ಮಹತ್ಯೆಗೆ ಮೊರೆಹೋದ ಜಿಯಾ ಖಾನ್ ಮತ್ತು ಹಿರಿಯ ನಟಿ ಪರ್ವೀನ್ ಬಾಬಿ ಅವರ ಜೊತೆಗಿನ ಭಟ್ ಸಂಬಂಧದ ಬಗ್ಗೆಯೂ ಸುದ್ದಿಗಳು ಹರಿದಾಡುತ್ತಿವೆ.

21 ವರ್ಷಗಳ ಬಳಿಕ ಅವರು ನಿರ್ದೇಶಿಸಿದ ಹೊಸ ಚಿತ್ರ 'ಸಡಕ್ 2' ಈಗ ಓಟಿಟಿ ಫ್ಲಾಟ್‌ಫಾರಂನಲ್ಲಿ ಓಡುತ್ತಿದೆ. 1991ರಲ್ಲಿ ತೆರೆಗೆ ಬಂದ ಅವರ ಸೂಪರ್‌ಹಿಟ್ ಚಿತ್ರ 'ಸಡಕ್'ನ ಮುಂದುವರಿದ ಭಾಗವಿದು. ಆದರೆ ಈ ಚಿತ್ರ ಹಿಂದಿನಂತೆ ಸುದ್ದಿ ಮಾಡಲಿಲ್ಲ. 1999ರಲ್ಲಿ ಅವರು 'ಕಾಡ್‌ತೂಸ್' ಎಂಬ ಸಿನಿಮಾ ನಿರ್ದೇಶಿಸಿದ್ದೇ ಕೊನೆ; ಆ ಬಳಿಕ ಕ್ಯಾಮೆರಾ ಹಿಂದೆ ನಿಂತಿರಲಿಲ್ಲ. 'ಸಡಕ್' ಮಾರ್ಟಿನ್ ಸ್ಕೋರ್ಸೆಸ್‌ನ 'ಟ್ಯಾಕ್ಸಿ ಡ್ರೈವರ್' ಎನ್ನುವ ಚಿತ್ರದ ಸ್ಫೂರ್ತಿ ಎನ್ನಲಾಗುತ್ತಿದೆ. ಸಂಜಯ್ ದತ್ ಎನ್ನುವ ಅಷ್ಟೇನೂ ಪ್ರತಿಭಾವಂತನಲ್ಲದ ನಟನಿಗೆ ಕೀರ್ತಿ ಕಿರೀಟ ಮುಡಿಸಿದ ಚಿತ್ರವದು. ವೇಶ್ಯಾವಾಟಿಕೆಯ ಏಜೆಂಟ್ ಆಗಿರುವ ಹಿಜಡಾ ಪಾತ್ರದ ಮೂಲಕ ಸದಾಶಿವ್ ಅಮ್ರಾಪುರ್‌ಕರ್ ಎಂಬ ಖಳ ಬಾಲಿವುಡ್‌ನಲ್ಲಿ ಗಟ್ಟಿಯಾಗಿ ತಳವೂರಿದ ಚಿತ್ರವೂ ಹೌದು.

ವಿವಾದಗಳು ಏನೇ ಇರಲಿ, ಮಹೇಶ್ ಭಟ್ ಎಂಬ ನಿರ್ದೇಶಕನ ಅದ್ಭುತ ಪ್ರತಿಭೆಯ ಬಗ್ಗೆ ಎರಡು ಮಾತಿಲ್ಲ. ಇವತ್ತು ಬಾಲಿವುಡ್‌ನಲ್ಲಿ ತಮ್ಮ ಪ್ರತಿಭೆಯ ಬಗ್ಗೆ ಗರ್ವ ಪಟ್ಟುಕೊಳ್ಳುತ್ತಿರುವ ಬಹುತೇಕ ನಟಿಯರು ಮಹೇಶ್ ಭಟ್ ಗರಡಿಯಲ್ಲಿ ಪಳಗಿದವರೇ. ಇಂತಹ ನಟಿಯರ ದೊಡ್ಡ ಪಟ್ಟಿಯನ್ನೇ ಕೊಡಬಹುದು. ಮಹೇಶ್ ಭಟ್ ನಿರ್ಮಿಸಿದ 'ಗ್ಯಾಂಗ್‌ಸ್ಟರ್' (ನಿರ್ದೇಶಕ ಅನುರಾಗ್ ಬಸು) ಚಿತ್ರದ ಮೂಲಕ ಬಾಲಿವುಡ್‌ನಲ್ಲಿ ಮಿಂಚಿದ ಕಂಗನಾ ರನೌಟ್ ಕೂಡಾ ಈ ಪಟ್ಟಿಯಲ್ಲಿ ಇದ್ದಾರೆ.

1982ರಲ್ಲಿ ಬಂದ 'ಅರ್ಥ್' ಚಿತ್ರವನ್ನೇ ಗಮನಿಸಿ. ಸ್ಮಿತಾ ಪಾಟೀಲ್, ಶಬನಾ ಆಜ್ಮಿ ಮತ್ತು ಕುಲಭೂಷಣ ಖರಬಂದ ಎಂಬ ಮೂವರನ್ನು ಪರಿಪೂರ್ಣವಾಗಿ ದುಡಿಸಿಕೊಂಡ ಚಿತ್ರವದು. ಆ ಬಳಿಕ ಈ ಮೂವರೂ ಬಾಲಿವುಡ್‌ನಲ್ಲಿ ತಮ್ಮದೇ ರೀತಿಯಲ್ಲಿ ಖ್ಯಾತಿಯ ಶಿಖರವೇರಿದರು. ವಿವಾಹಬಾಹಿರ ಸಂಬಂಧದ ಕಥೆಯದು. ಮಹೇಶ್ ಭಟ್ ಸ್ವಂತ ಜೀವನದ ಕಥೆಯೇ ಅದು ಎನ್ನುವವರಿದ್ದಾರೆ. ಕಿರಣ್ ಭಟ್ ಜೊತೆಗೆ ಮಹೇಶ್ ಮದುವೆಯಾದದ್ದು 1970ರಲ್ಲಿ. ಈ ಮದುವೆ ಊರ್ಜಿತದಲ್ಲಿ ಇರುವಾಗಲೇ 1986ರಲ್ಲಿ ಸೋನಿ ರಾಜ್ದಾನ್ ಅವರನ್ನು ಮದುವೆಯಾದರು. ಮದುವೆಗೂ ಮುಂಚೆ ಸೋನಿ ಜೊತೆಗೆ ಸಂಬಂಧ ಇಟ್ಟುಕೊಂಡಿದ್ದ ಭಟ್, ಅದನ್ನೇ ಚಿತ್ರಕಥೆಯಾಗಿಸಿದರಂತೆ.

ಅನುಪಮ್ ಖೇರ್ ಒಳಗಿದ್ದ ಅದ್ಭುತ ನಟನನ್ನು ಮೊದಲ ಬಾರಿಗೆ 'ಸಾರಾಂಶ್' ಮೂಲಕ ತೆರೆಗೆ ತಂದವರು ಮಹೇಶ್ ಭಟ್. ಇವತ್ತಿಗೂ ಬಾಲಿವುಡ್‌ನಲ್ಲಿ ಅದೊಂದು ಕಲ್ಟ್ ಸಿನಿಮಾ. ನಟನೆಯಲ್ಲಿ ಕಳಪೆ ಎನ್ನಬಹುದಾದ ಕುಮಾರ್ ಗೌರವ್‌ನನ್ನು ಸಂಜಯ್ ದತ್ ಜೊತೆಗೂಡಿಸಿ ತೆರೆಗೆ ತಂದ 'ನಾಮ್' ಚಿತ್ರ ಕೂಡಾ ಬಾಕ್ಸಾಫೀಸ್‌ನಲ್ಲಿ ಗೆದ್ದಿತು. ಮಹೇಶ್ ಭಟ್‌ಗೆ ಹೆಸರು ತಂದ ಮತ್ತೊಂದು ಚಿತ್ರ 'ಜಖ್ಮ್'. ಇವತ್ತು ನಮ್ಮ ಸಮಾಜದಲ್ಲಿ ಎದ್ದುಕಾಣುತ್ತಿರುವ ಧಾರ್ಮಿಕ ಉನ್ಮಾದದ ಎಳೆಗಳನ್ನು 22 ವರ್ಷಗಳ ಹಿಂದೆಯೇ ಗುರುತಿಸಿದ್ದರು ಮಹೇಶ್ ಭಟ್. ಈ ಚಿತ್ರದಲ್ಲಿ ಅಜಯ್ ದೇವಗನ್, ನಾಗಾರ್ಜುನ, ಸೊನಾಲಿ ಬೇಂದ್ರೆ ಅವರನ್ನು ದುಡಿಸಿಕೊಂಡ ಭಟ್, ಅಶುತೋಷ್ ರಾಣಾ ಎಂಬ ಹೊಸ ಖಳನನ್ನು ರೂಪಿಸಿದರು. ಅವರು ಖಳನಾಯಕನ ಪಾತ್ರದಲ್ಲಿ ರೂಪಿಸಿದ ಸದಾಶಿವ ಅಮ್ರಾಪುರ್‌ಕರ್, ಪರೇಶ್ ರಾವಲ್ (ನಾಮ್) ಮತ್ತು ಅಶುತೋಷ್ ರಾಣಾ ಮುಂದೆ ಬಾಲಿವುಡ್‌ನಲ್ಲಿ ತಮ್ಮದೇ ಆದ ಖಳಪರಂಪರೆಯನ್ನು ರೂಪಿಸಿಕೊಂಡರು.

ಹಾಗೆಂದು ಹೊಸ ಅಲೆ ಅಥವಾ ಬ್ರಿಜ್ ಚಿತ್ರಗಳಲ್ಲೇ ಖ್ಯಾತಿ ಹೊಂದಿದವರು ಎಂದು ಮಹೇಶ್ ಭಟ್‌ರನ್ನು ನಿರ್ಲಕ್ಷಿಸಲಾಗದು. ಅಮೀರ್ ಖಾನ್ ಮತ್ತು ಜೂಹಿ ಚಾವ್ಲಾ ನಟಿಸಿದ 'ಹಮ್ ಹೆ ರಾಹೀ ಪ್ಯಾರ್ ಕೆ' ಕಮರ್ಷಿಯಲ್ ಸೂಪರ್ ಹಿಟ್ ಆಯಿತು. ವಿಶೇಷ ಜ್ಯೂರಿ ರಾಷ್ಟ್ರಪ್ರಶಸ್ತಿಯನ್ನೂ ಗೆದ್ದಿತು. 'ಜಖ್ಮ್'ಗೆ ರಾಷ್ಟ್ರೀಯ ಭಾವೈಕ್ಯತೆ ಉದ್ದೀಪಿಸುವ ಚಿತ್ರವೆಂದು 'ನರ್ಗಿಸ್ ದತ್' ಪ್ರಶಸ್ತಿ ಬಂತು. ಅಪ್ಪಮಗಳ ಅಪರೂಪದ ಅನುಬಂಧವನ್ನು ತೆರೆಗೆ ತಂದ 'ಡ್ಯಾಡಿ' ಮತ್ತು 88ರಲ್ಲಿ ತೆರೆಗೆ ಬಂದ 'ಕಬ್ಜಾ' ಕೂಡಾ ಈಗಲೂ ನೆನಪಿಡಬಹುದಾದ ಚಿತ್ರಗಳು. 1990ರಲ್ಲಿ ತೆರೆಗೆ ಬಂದು ಬಾಲಿವುಡ್‌ನಲ್ಲಿ ಸಂಗೀತದ ಮೂಲಕ ಸೂಪರ್ ಹಿಟ್ ಎನ್ನಿಸಿದ ಚಿತ್ರ 'ಆಶಿಕೀ'. ಈ ಚಿತ್ರದ ಹಾಡುಗಳು 30 ವರ್ಷಗಳ ಬಳಿಕವೂ ಜನಪ್ರಿಯವಾಗಿ ಉಳಿದುಕೊಂಡಿವೆ! ನಾಲ್ಕು ಫಿಲಂಫೇರ್ ಪ್ರಶಸ್ತಿಗಳನ್ನು ಗೆದ್ದುಕೊಂಡ ಈ ಚಿತ್ರ ರಾಹುಲ್ ರಾಯ್ ಮತ್ತು ಅನು ಅಗರವಾಲ್ ಎಂಬ ಹೊಸ ನಟ ನಟಿಯನ್ನು ರಾತ್ರಿ ಬೆಳಗಾಗುವುದರೊಳಗೆ ಕೀರ್ತಿಶಿಖರಕ್ಕೆ ಏರಿಸಿತ್ತು. 'ಮರ್ಡರ್', 'ಗ್ಯಾಂಗ್‌ಸ್ಟರ್' 'ರಾಝ್' ಮುಂತಾದ ಚಿತ್ರಗಳನ್ನು ನಿರ್ಮಿಸುವ ಮೂಲಕ ಬಾಲಿವುಡ್‌ನಲ್ಲಿ ಥ್ರಿಲ್ಲರ್‌ಗಳ ಹೊಸ ಪರಂಪರೆಯೊಂದನ್ನು ಸೃಷ್ಟಿಸಿದ ಕೀರ್ತಿಯೂ ಮಹೇಶ್ ಭಟ್‌ರದ್ದು.

ಸುಶಾಂತ್ ರಿಯಾ ಕುರಿತ ಹೊಸ ವಿವಾದ ಮಹೇಶ್ ಭಟ್ ಅವರನ್ನು ದೃಶ್ಯಮಾಧ್ಯಮದಲ್ಲಿ ವಿಲ್ಲನ್‌ನ ಸ್ಥಾನದಲ್ಲಿ ನಿಲ್ಲಿಸಿರುವುದಂತೂ ಸತ್ಯ. ಆದರೆ ಟಿವಿಯಲ್ಲಿ ಕಂಡದ್ದಷ್ಟೇ ಸತ್ಯವಲ್ಲ ಎನ್ನುವುದು ಮಹೇಶ್ ಭಟ್ ಅಭಿಮಾನಿಗಳಿಗೆ ಗೊತ್ತಿದೆ. ಹಿಂದೆ 'ಜಖ್ಮ್' ಚಿತ್ರದ ಬಿಡುಗಡೆ ಸಂದರ್ಭದಲ್ಲಿ ಮಹೇಶ್ ಭಟ್ ಆಳುವ ಪಕ್ಷದ ಆಕ್ರೋಶಕ್ಕೆ ಗುರಿಯಾಗಿದ್ದರು. ಆದರೆ ಅದು ಅವರನ್ನು ವಿಚಲಿತಗೊಳಿಸಲಿಲ್ಲ. ಅವರು ತಮ್ಮದೇ ದಾರಿಯಲ್ಲಿ ಹೆಜ್ಜೆ ಹಾಕಿದರು. ಈಗಲೂ ಪರಿಸ್ಥಿತಿ ಹಾಗೆಯೇ ಕಾಣಿಸುತ್ತಿದೆ.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65